# ಹೂಡಿ ವಾರ್ಡ್

# ಜನಹಿತ

## ಮಹದೇವಪುರ ವಿಧಾನಸಭಾ ಕ್ಷೇತ್ರ



ಅರವಿಂದ ಲಿಂಬಾವಳಿ








ವಾರಣಾಸಿ ಕುಡಿಯುವ ನೀರು
ಸರಬರಾಜಿಗೆ ಚಾಲನೆ



ಬಿಳಿಶಿವಾಲೆ ಸರ್ಕಾರಿ ಶಾಲೆಯಲ್ಲಿ
ಪ್ರಶಸ್ತಿಪತ್ರಗಳ ವಿತರಣೆ



ಬೈರತಿ ಆವಲಹಳ್ಳಿ ರಸ್ತೆಗೆ ಪೂಜೆ








ಓಂ ರೆಸಿಡೆನ್ಸಿ ಲೇ ಔಟ್, ತಿಗಳರ ಪಾಳ್ಯ
ಮತ್ತು ಕೊಡಿಗೇಹಳ್ಳಿಗಳಲ್ಲಿ ವಿವಿಧ
ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ

## ನಿಮ್ಮೊಡನೆ...



**ಮಹದೇವಪುರ ವಿಧಾನಸಭಾ ಕ್ಷೇತ್ರದ ಹೂಡಿ ವಾರ್ಡ್ ಪ್ರದೇಶದ ಪ್ರಿಯ ಸಾರ್ವಜನಿಕ ಬಂಧುಗಳೆ,**

ನಿಮ್ಮೆಲ್ಲರ ಸದಾಶಯದಿಂದ ಮಹದೇವಪುರ ವಿಧಾನಸಭಾ ಕ್ಷೇತ್ರದ ಶಾಸಕನಾಗಿ ಆಯ್ಕೆಯಾದ ನಾನು ಈವರೆಗೆ ಹೂಡಿ ವಾರ್ಡ್ ಪ್ರದೇಶದಲ್ಲಿ ಕೈಗೊಂಡ ಕೆಲಸಕಾರ್ಯಗಳ ಕಿರುನೋಟ ಇಲ್ಲಿದೆ. 'ಅಭಿವೃದ್ಧಿಯ ಲೆಕ್ಕ' ಕೊಡುವುದು ನನ್ನ ಹೊಣೆಗಾರಿಕೆ ಎಂದು ತಿಳಿದೇ ಇದನ್ನು ನಿಮ್ಮ ಮುಂದೆ ಇಟ್ಟಿದ್ದೇನೆ. ಇಲ್ಲಿ ದಾಖಲಿಸಿದ ಅಭಿವೃದ್ಧಿಯ ಕೆಲಸಕಾರ್ಯಗಳಿಂದಾಗಿ ಎಲ್ಲ ಸಮಸ್ಯೆಗಳೂ ಬಗೆಹರಿದಿವೆ ಎಂದು ನಾನು ಖಂಡಿತವಾಗಿಯೂ ಭಾವಿಸಿಲ್ಲ.

**ದಶಕಗಳಿಂದ ಅಭಿವೃದ್ಧಿಯನ್ನು ಕಾಣದೆ ಸೊರಗಿದ್ದ ಕ್ಷೇತ್ರಕ್ಕೆ ಒದಗಬೇಕಾದ ನ್ಯಾಯ ಇನ್ನೂ ಇದೆ!**

ಈಗ ಕೈಗೊಂಡ, ಜಾರಿಯಾಗಲಿರುವ ಮತ್ತು ಮಂಜೂರಾದ ಎಲ್ಲ ಯೋಜನೆಗಳು, ಕಾರ್ಯಕ್ರಮಗಳು ಮಹದೇವಪುರ ಕ್ಷೇತ್ರದ ಅಭ್ಯುದಯದ ಹಾದಿಯ ಮೊದಲ ಹೆಜ್ಜೆ ಎಂದೇ ನಾನು ಭಾವಿಸಿದ್ದೇನೆ. ಕ್ಷೇತ್ರದ ಏಳಿಗೆಗಾಗಿ ಶ್ರಮಿಸಲು ನೂರಾರು ಕಾರ್ಯಕರ್ತರ, ಸಾಮಾಜಿಕ ಚಿಂತಕರ, ಅಭಿವೃದ್ಧಿ ತಜ್ಞರ ಮತ್ತು ಕಾರ್ಯನಿಷ್ಠ ಅಧಿಕಾರಿಗಳ ದೊಡ್ಡ ಪಡೆಯೇ ಇದೆ.

ಪ್ರದೇಶದ ಇನ್ನುಳಿದ ಕೆಲಸಗಳ ಬಗ್ಗೆಯೂ ಚಿಂತನ, ಮಂಥನ, ಕ್ರಿಯಾಯೋಜನೆಗಳ ತಯಾರಿ ನಡೆದಿದೆ. ನಿಮ್ಮ ಸಲಹೆ, ಸೂಚನೆ, ರಚನಾತ್ಮಕ ಟೀಕೆ, ಟಿಪ್ಪಣಿ, – ಎಲ್ಲವನ್ನೂ ಗಮನದಲ್ಲಿ ಇಟ್ಟುಕೊಂಡು ಮುಂದುವರಿಯುತ್ತೇನೆ. ಮುಂದಿನ ದಿನಗಳಲ್ಲೂ ನಿಮ್ಮ ಸ್ನೇಹ, ಪ್ರೀತಿ, ಅಭಿಮಾನ, ಬೆಂಬಲ ಅತ್ಯಂತ ಅವಶ್ಯಕ.

**ಬನ್ನಿ, ಮಹದೇವಪುರವನ್ನು ಬೆಂಗಳೂರಿನ ಅಭಿವೃದ್ಧಿ ಸೂಚ್ಯಂಕದ ಮುಕುಟಮಣಿ ಮಾಡೋಣ.**

ಎಂದೆಂದಿಗೂ ನಿಮ್ಮವ,

(ಅರವಿಂದ ಲಿಂಬಾವಳಿ)

# 1200 ಕೋಟಿ ರೂ. ದಾಟಿದ ಅಭಿವೃದ್ಧಿ ಕಾರ್ಯ

ಮಹದೇವಪುರ ವಿಧಾನಸಭಾ ಕ್ಷೇತ್ರಕ್ಕೆ ಕಳೆದ ನಾಲ್ಕು ವರ್ಷಗಳಲ್ಲಿ ಹರಿದು ಬಂದ ಅಭಿವೃದ್ಧಿಯ ಹಣದ ಮೊತ್ತ 1200 ಕೋಟಿ ರೂ. ದಾಟಿದೆ. ಈ ಎಲ್ಲ ಹಣವೂ ಮಹದೇವಪುರದ ನಾಗರಿಕರ ಸಕಲ ಸವಲತ್ತುಗಳಿಗಾಗಿ, ಮೂಲಸೌಕರ್ಯಕ್ಕಾಗಿ, ಶಿಕ್ಷಣಕ್ಕಾಗಿ, ಸಾಮಾಜಿಕ ಉನ್ನತಿಗಾಗಿ, ಮನೆಗಳಿಗಾಗಿ, – ಒಟ್ಟಾರೆ ಹೇಳುವುದಾದರೆ ಕ್ಷೇತ್ರದ ಜನತೆಗಾಗಿ ವೆಚ್ಚವಾಗಿದೆ.

ಬೆಂಗಳೂರು ನಗರದ ಅಭಿವೃದ್ಧಿ ಯೋಜನೆ ಜಾರಿ ಸಂಸ್ಥೆಗಳು, ಹಿಂದುಳಿದ ವರ್ಗದ ಕಲ್ಯಾಣಕ್ಕೆ ಸ್ಥಾಪನೆಯಾಗಿರುವ ಸಂಸ್ಥೆ ಮತ್ತು ನಿಧಿಗಳು, ರಾಜ್ಯ ಸರ್ಕಾರದ ಗೃಹ, ವಸತಿ, ಸಮಾಜ ಕಲ್ಯಾಣ, ಆರೋಗ್ಯ, ಸಾರಿಗೆ, ಶಿಕ್ಷಣ ಮುಂತಾದ ವಿವಿಧ ಇಲಾಖೆಗಳ ನಿಧಿಗಳು, ಸ್ವತಃ ಶಾಸಕರ ಕ್ಷೇತ್ರ ಅಭಿವೃದ್ಧಿ ನಿಧಿ, ಕೇಂದ್ರ ಸರ್ಕಾರದ ಯೋಜನೆಗಳು – ಅರವಿಂದ ಲಿಂಬಾವಳಿಯವರು ಈ ಎಲ್ಲ ಯೋಜನೆಗಳನ್ನೂ ಕ್ಷೇತ್ರದ ಅಭ್ಯುದಯಕ್ಕಾಗಿ ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಶಾಸಕನೊಬ್ಬ ಕ್ಷೇತ್ರದ ಅಭಿವೃದ್ಧಿಯ ಪಣ ತೊಟ್ಟರೆ, ಸರ್ಕಾರವೂ ಸ್ಪಂದಿಸುತ್ತದೆ, ಸರ್ಕಾರದ ಹಣವು ಜನಹಿತಕ್ಕೆ ಬಳಕೆಯಾಗುತ್ತದೆ; ಎಲ್ಲೆಲ್ಲೂ ಗುಣಮಟ್ಟದ ಕೆಲಸವಾಗುತ್ತದೆ ಎನ್ನುವುದಕ್ಕೆ ಈ ಎಲ್ಲ ಕಾಮಗಾರಿಗಳೇ ನಿದರ್ಶನ.

ಮುಂದಿನ ವರ್ಷಗಳಿಗೂ ಇನ್ನೂ ನೂರಾರು ಕೋಟಿ ರೂ.ಗಳ ಹಣವನ್ನು ತರುವ ಕೆಲಸ ಪ್ರಗತಿಯಲ್ಲಿದೆ. ಆದ್ದರಿಂದ ಮಹದೇವಪುರವು ಬರುವ ದಿನಗಳಲ್ಲಿ ಮತ್ತಷ್ಟು ಅಭಿವೃದ್ಧಿಯನ್ನು ಕಾಣುವುದು ಖಚಿತ.

# ಮಹದೇವಪುರ ವಿಧಾನಸಭಾ ಕ್ಷೇತ್ರ

# ಸಂಪನ್ಮೂಲ: ಎಲ್ಲಿಂದ, ಎಷ್ಟು?

(ಲಕ್ಷ ರೂ.ಗಳಲ್ಲಿ)

**ಅಭಿವೃದ್ಧಿ ಯೋಜನೆಗಳಿಗಾಗಿ ಅರವಿಂದ ಲಿಂಬಾವಳಿ ಭರ್ಜರಿ ಬ್ಯಾಟಿಂಗ್!**






**ಅನುಬಂಧ 1 — 11054.75**

- ಲೋಕೋಪಯೋಗಿ ಇಲಾಖೆ (ಪ್ರಮುಖ ರಸ್ತೆಗಳು, ಹೈಮಾಸ್ಟ್ ದೀಪಗಳು)
- ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ (ಆರ್‌ಡಿಪಿಆರ್) (ರಸ್ತೆ, ಚರಂಡಿ ಮತ್ತು ಕುಡಿಯುವ ನೀರು ಇತ್ಯಾದಿ)
- ಪ್ರಧಾನಮಂತ್ರಿ ಗ್ರಾಮೀಣ ಸಡಕ್ ಯೋಜನೆ (ಪಿಎಂಎಸ್‌ಜಿವೈ) (ರಸ್ತೆಗಳು)
- ಬಿಬಿಎಂಪಿ ಘನತ್ಯಾಜ್ಯ (ಬಿಬಿಎಂಪಿ ಎಸ್‌ಡಬ್ಲ್ಯುಎಂ) (ಗ್ರಾಮೀಣ ಮುಖ್ಯ ರಸ್ತೆಗಳು ಮತ್ತು ವಸತಿ ಪ್ರದೇಶದ ರಸ್ತೆಗಳು)

**ಅನುಬಂಧ 2 — 20474.29**

- ಬಿಬಿಎಂಪಿ ಬೃಹತ್ ರಸ್ತೆಗಳು (ಒಳಸಂಪರ್ಕ ರಸ್ತೆಗಳು, ಪಾದಚಾರಿ ಮಾರ್ಗಗಳು, ಚರಂಡಿ ಮತ್ತು ಇತರೆ ಮೂಲಭೂತ ಸೌಕರ್ಯಗಳು)

**ಅನುಬಂಧ 3 — 12521.89**

- ಬೃಹತ್ ಬೆಂಗಳೂರು ಮಹಾನಗರಪಾಲಿಕೆ (ಬಿಬಿಎಂಪಿ ವಲಯ ಕಾಮಗಾರಿ) (ಮುಖ್ಯ ರಸ್ತೆಗಳು, ವಸತಿಪ್ರದೇಶದ ರಸ್ತೆಗಳು, ಕೆಆರ್‌ಸಿ ರಸ್ತೆಗಳು, ಚರಂಡಿಗಳು,ಇತರೆ ಮೂಲಭೂತ ಸೌಕರ್ಯಗಳು)

## ಅನುಬಂಧ 4 — 2387.00

- ಬಿಬಿಎಂಪಿ ಯೋಜನೆ (ಈ–ಲೈಬ್ರರಿ, ಸೇತುವೆಗಳು, ರಂಗಮಂದಿರ, ಮಾರುಕಟ್ಟೆ, ಚಿತಾಗಾರ)

## ಅನುಬಂಧ 5 — 19342.00

- ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ರಸ್ತೆಗಳು, ಚರಂಡಿಗಳು)

## ಅನುಬಂಧ 6 — 6785.50

- ವಸತಿ (ಹಕ್ಕುಪತ್ರಗಳ ವಿತರಣೆ, ಮನೆ ನಿರ್ಮಾಣ, ನಿವೇಶನ ವಿತರಣೆ)
- ಕಂದಾಯ ಇಲಾಖೆ (ಸಾರ್ವಜನಿಕ ಉದ್ದೇಶಗಳಿಗಾಗಿ ಮೀಸಲಿಟ್ಟ ಪ್ರದೇಶಗಳು)

## ಅನುಬಂಧ 7 — 32000.21

- ಕೆರೆಗಳು (ಅಂತರ್ಜಲ, ಸಂರಕ್ಷಣೆ, ಅಭಿವೃದ್ಧಿ)
- ಸಣ್ಣ ನೀರಾವರಿ (ಏತ ನೀರಾವರಿ, ಕೆರೆಗಳ ಅಭಿವೃದ್ಧಿ)
- ಬಿಡಬ್ಲ್ಯುಎಸ್‌ಎಸ್‌ಬಿ (ಕಾವೇರಿ ನೀರು, ಕೊಳವೆ ಮಾರ್ಗಗಳು, ಒಳಚರಂಡಿ)
- ಸ್ಟಾರ್ಮ್ ವಾಟರ್ ಡ್ರೈನ್‌ಗಳು (ರಾಜಾ ಕಾಲುವೆಗಳ ಅಭಿವೃದ್ಧಿ)

## ಅನುಬಂಧ 8 — 5048.82

- ವಿದ್ಯುತ್ (ಹೊಸ ವಿದ್ಯುತ್ ಮಾರ್ಗಗಳು, ಭೂಗತ ಕೇಬಲ್‌ಗಳು, ಬೀದಿ ದೀಪಗಳು, 66/11 ಸ್ಥಾವರಗಳು, ಟ್ರಾನ್ಸ್‌ಫಾರ್ಮರ್‌ಗಳ ಅಳವಡಿಕೆ)
- ಬಿಬಿಎಂಪಿ ದೀಪಗಳು (ವಸತಿ ಪ್ರದೇಶ ಹಾಗೂ ರಸ್ತೆಗಳಿಗೆ ವಿದ್ಯುದೀಕರಣ)

## ಅನುಬಂಧ 9 — 2466.00

- ಶಿಕ್ಷಣ (ಶಾಲಾ ಕೊಠಡಿ, ಶೌಚಾಲಯ, ಗ್ರಂಥಾಲಯ, ಮೂಲಭೂತ ಸೌಕರ್ಯ)
- ಗ್ರಂಥಾಲಯಗಳು

## ಅನುಬಂಧ 10 — 4850.00

- ಬಿಎಂಟಿಸಿ (ಟಿಟಿಎಂಸಿ ಬಸ್ ನಿಲ್ದಾಣಗಳು, ಬಸ್ ಡಿಪೋ, ಹೊಸ ಬಸ್ ಮಾರ್ಗಗಳು)

## ಅನುಬಂಧ 11 — 4580.00

- ರೈಲ್ವೆ ಇಲಾಖೆ

## ಅನುಬಂಧ 12 — 61.10

- ಆರೋಗ್ಯ (ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಆಸ್ಪತ್ರೆ ಮೂಲಸೌಕರ್ಯಗಳು)
- ಮುಖ್ಯಮಂತ್ರಿಯವರ ಪರಿಹಾರ ನಿಧಿ

## ಅನುಬಂಧ 13 — 658.40

- ಶಾಸಕರ ನಿಧಿ (ಸಮುದಾಯ ಭವನ, ಶಾಲಾ ಕೊಠಡಿಗಳು, ರಂಗಮಂದಿರ ಇತ್ಯಾದಿ)
- ಮಹಿಳಾ ಮತ್ತು ಮಕ್ಕಳ ಕಲ್ಯಾಣ (ಅಂಗನವಾಡಿ ನಿರ್ಮಾಣ)
- ಹಿಂದುಳಿದ ವರ್ಗಗಳು (ಬಿಸಿಎಂ) (ಹಾಸ್ಟೆಲ್ ನಿರ್ಮಾಣ, ಫಲಾನುಭವಿಗಳಿಗೆ ಸೌಕರ್ಯಗಳು)

## ಅನುಬಂಧ 14 — 2497.62

- ಬಿಬಿಎಂಪಿ ಶೇ. 22.75ರ ಕಾಮಗಾರಿಗಳು(ಕಾಲೋನಿಗಳ ಅಭಿವೃದ್ಧಿ, ಮನೆ ನಿರ್ಮಾಣ, ಫಲಾನುಭವಿಗಳಿಗೆ ಸೌಕರ್ಯಗಳು)
- ಸಮಾಜ ಕಲ್ಯಾಣ ಇಲಾಖೆ (ಕಾಲೋನಿಗಳ ಅಭಿವೃದ್ಧಿ)
- ಸಾಮಾಜಿಕ ಅಭ್ಯುದಯದ ವಿವಿಧ ಯೋಜನೆ, ತರಬೇತಿ, ನೆರವು ಮತ್ತು ಇತರೆ ಕಾರ್ಯಕ್ರಮಗಳ ವಿವರಗಳು

## ಅನುಬಂಧ 15 — 61.50

- ಮುಜರಾಯಿ / ಆರಾಧನಾ (ದೇವಾಲಯಗಳ ಅಭಿವೃದ್ಧಿ, ಜೀರ್ಣೋದ್ಧಾರ)

## ಅನುಬಂಧ 16 — 63.50

- ಕೆ ಎಂ ಎಫ್
- ಗೃಹ ಇಲಾಖೆ

**ಒಟ್ಟು — 124852.58**

### ಗಮನಿಸಿ

- ಈ ಮೊತ್ತದಲ್ಲಿ ಸಾರ್ವಜನಿಕ ಉದ್ದೇಶಕ್ಕೆ ಹೊಸದಾಗಿ ಕಾಯ್ದಿರಿಸಿದ 270 ಎಕರೆ ಸರ್ಕಾರಿ ಭೂಪ್ರದೇಶದ ಅಂದಾಜು ಮೌಲ್ಯ 1350 ಕೋಟಿ ರೂ. ಸೇರಿಲ್ಲ.
- ಭಾಗ್ಯಲಕ್ಷ್ಮಿ, ಸಂಧ್ಯಾ ಸುರಕ್ಷಾ ಯೋಜನೆ ಹಾಗೂ ವಿವಿಧ ಫಲಾನುಭವಿಗಳ ಮೊತ್ತ ಇಲ್ಲಿ ಸೇರಿಲ್ಲ.
- ಪುಸ್ತಕದ ಕೊನೆಯಲ್ಲಿ ನೀಡಿರುವ ಹೊಸದಾಗಿ ಬರಲಿರುವ ಯೋಜನೆಗಳ ಮೊತ್ತವು ಇಲ್ಲಿ ಸೇರಿಲ್ಲ.
- 'ನಮ್ಮ ಮೆಟ್ರೋ' ಯೋಜನೆಯ ಮೊತ್ತ ಇಲ್ಲಿ ಸೇರಿಲ್ಲ.

# ಹೂಡಿ ವಾರ್ಡ್

## ಪ್ರಮುಖ ಅಭಿವೃದ್ಧಿ ಕಾಮಗಾರಿಗಳು

ಶ್ರೀ ಅರವಿಂದ ಲಿಂಬಾವಳಿಯವರ ಶಾಸಕತ್ವದಲ್ಲಿ ಮಹದೇವಪುರ ಕ್ಷೇತ್ರದ ಹೂಡಿ ವಾರ್ಡಿನಲ್ಲಿ ನಡೆದ ಅಭಿವೃದ್ಧಿ ಕಾಮಗಾರಿಗಳ ಪ್ರಮುಖ ಅಂಶಗಳು ಹೀಗಿವೆ:

- ಹೂಡಿ, ಐಯಪ್ಪನಗರ, ವಾರಣಾಸಿ, ಬಿಳಿ ಶಿವಾಲೆ, ಬೈರತಿ, ಬೈರತಿ ಬಂಡೆ, ಬೆಳತ್ತೂರು, ಬೆಳತ್ತೂರು ಕಾಲೋನಿಗಳಲ್ಲಿ ರಸ್ತೆಗಳು ಈ ಕಾಲಾವಧಿಯಲ್ಲೇ ಸುಧಾರಣೆ ಕಂಡಿವೆ.
- ಟಿಸಿ ಪಾಳ್ಯ ಮುಖ್ಯರಸ್ತೆಯಿಂದ ವಾರಣಾಸಿ ಮಾರ್ಗ ಕೆ ಚನ್ನಸಂದ್ರ ಸೇರುವ ರಸ್ತೆ, ಕೆ ಚನ್ನಸಂದ್ರದಿಂದ ಬಿಳಿಶಿವಾಲೆ, ಆವಲಹಳ್ಳಿ ರಸ್ತೆ ಸೇರುವ ರಸ್ತೆ ಅಭಿವೃದ್ಧಿಯಾಗಿದೆ.
- ಹೂಡಿಯಲ್ಲಿ ಮಿನಿ ಕ್ರೀಡಾಂಗಣ ಅಭಿವೃದ್ಧಿಯಾಗುತ್ತಿದೆ.
- ಹೂಡಿ ಐಟಿಪಿಎಲ್ ರಸ್ತೆ ನಿರ್ಮಾಣ
- ಹೂಡಿ ರೈಲ್ವೆ ಕ್ರಾಸಿಂಗ್ ಬಳಿ ಮೇಲುಸೇತುವೆ ಇಲ್ಲದೆ ಜನತೆ ತುಂಬಾ ಸಮಸ್ಯೆ ಎದುರಿಸುತ್ತಿದ್ದರು. ಈಗ ಈ ಕಾಮಗಾರಿ ಆರಂಭವಾಗಿದೆ.
- ಕೊಡಿಗೇಹಳ್ಳಿ, ಶಾಂತಿನಗರ ಮುಂತಾದ ಬಡಾವಣೆಗಳಲ್ಲಿ ಗುಂಡಿಗಳೇ ತುಂಬಿದ್ದವು. ಈಗ ರಸ್ತೆ, ಒಳಚರಂಡಿ ಕಾಮಗಾರಿಗಳಾಗಿವೆ.
- ಹೂಡಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 15 ಕೊಠಡಿಗಳನ್ನು ನಿರ್ಮಿಸಿದ್ದರಿಂದ ವಿದ್ಯಾರ್ಥಿಗಳಿಗೆ ತುಂಬಾ ಅನುಕೂಲವಾಗಿದೆ. ಈವರೆಗೆ ಶಾಲೆಯ ಹೊರಗಡೆಯೇ ಹಲವು ತರಗತಿಗಳು ನಡೆಯುತ್ತಿದ್ದವು.
- ಹೂಡಿ–ಅಯ್ಯಪ್ಪನಗರ ರಸ್ತೆಯಿಂದಾಗಿ ಜನರಿಗೆ ತುಂಬಾ ಅನುಕೂಲವಾಗಿದೆ. ಅಲ್ಲೀಗ ಹೈಮಾಸ್ಟ್ ದೀಪಗಳು ಬಂದಿವೆ.

- ಅಯ್ಯಪ್ಪನಗರದಲ್ಲಿ ಬರೀ ಮಣ್ಣಿನ ರಸ್ತೆಗಳಿದ್ದವು; ಚರಂಡಿಯಂತೂ ಇರಲೇ ಇಲ್ಲ. ಈಗ ಅಲ್ಲಿ 5 ಕೋಟಿ ರೂ. ಕಾಮಗಾರಿ ನಡೆದಿದೆ.
- ಅಯ್ಯಪ್ಪನಗರ–ಕೊಡಿಗೇಹಳ್ಳಿ–ಸಾದರಮಂಗಲ–ಬೆಳತ್ತೂರು ಪರ್ಯಾಯ ರಸ್ತೆಯನ್ನು ನಿರ್ಮಿಸಿದ್ದರಿಂದ ಇಡೀ ಪರಿಸರದ ಚಿತ್ರ ಬದಲಾಗಿದೆ.
- ಸಾದರಮಂಗಲ, ಹೂಡಿ ಕೆರೆಗಳಿಗೆ ತಂತಿ ಬೇಲಿ ಹಾಕಲಾಗಿದೆ.
- ಸಾದರಮಂಗಲದಲ್ಲಿ ಕೊಳಚೆಗೇರಿ ನಿವಾಸಿಗಳಿಗೆ ಮನೆಗಳನ್ನು ನೀಡಲಾಗಿದೆ.
- ಸಾದರಮಂಗಲದಲ್ಲಿ ಒಂದು ವಿದ್ಯುತ್ ಚಿತಾಗಾರದ ನಿರ್ಮಾಣ ಕಾಮಗಾರಿ ಆರಂಭವಾಗಲಿದೆ.
- ಬೆಳತ್ತೂರು ಮುಖ್ಯರಸ್ತೆಯಿಂದ ಕಾಡುಗೋಡಿ ಮುಖ್ಯರಸ್ತೆವರೆಗೆ ಬೀದಿದೀಪಗಳು ಬಂದಿದ್ದು ಅಲ್ಲೀಗ ಅಪಘಾತಗಳೂ ಕಡಿಮೆ; ಅಪರಾಧವೂ ಗಮನಾರ್ಹವಾಗಿ ತಗ್ಗಿದೆ.
- ಸಾದರಮಂಗಲ ಕೈಗಾರಿಕಾ ಪ್ರದೇಶಕ್ಕೂ ಬೀದಿದೀಪಗಳು ಬಂದಿವೆ.
- ವಾರಣಾಸಿ ಗ್ರಾಮದಲ್ಲಿ ಸುಮಾರು 6 ಕೋಟಿ ರೂ. ಕೆಲಸ ಆಗಿದೆ. ಒಂದು ರೀತಿಯಲ್ಲಿ ಇಡೀ ಗ್ರಾಮವೇ ಪುನರ್ನಿರ್ಮಾಣವಾಗಿದೆ.
- ಹೊರವರ್ತುಲ ರಸ್ತೆಯಿಂದ ಐಟಿಪಿಎಲ್ ಮುಖಾಂತರ ಹೋಪ್ ಫಾರ್ಮ್‌ಗೆ ಹೋಗುವ ರಸ್ತೆಯನ್ನು 8 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿದೆ.
- ಸಾದರಮಂಗಲದಲ್ಲಿ ಸಮುದಾಯ ಭವನ ನಿರ್ಮಾಣವಾಗುತ್ತಿದೆ.
- ಬೈರತಿ – ಬಿಳಿಶಿವಾಲೆ–ಆವಲಹಳ್ಳಿ 11 ಕಿಮೀ ಪ್ರಮುಖ ರಸ್ತೆಯೂ ಸುಧಾರಣೆಗೊಂಡಿದೆ.
- ರಾಜಪಾಳ್ಯ–ತಿಗಳರ ಪಾಳ್ಯ–ಐಟಿಪಿಎಲ್ ರಸ್ತೆಯನ್ನು ಖಾಸಗಿ ನಿವೇಶನ ಮಾಲೀಕರ ಮನ ಒಲಿಸಿ ಅಗಲೀಕರಿಸಿದ್ದು ಈ ಪ್ರದೇಶದ ಪ್ರಮುಖ ಸಂಚಾರ ಬಿಕ್ಕಟ್ಟು ನಿವಾರಣೆಯಾಗಿದೆ.
- ಬಿಳಿಶಿವಾಲೆ ಗ್ರಂಥಾಲಯ ಮಂಜೂರಾಗಿದೆ.

- ಹೂಡಿ, ರಾಜಪಾಳ್ಯ, ತಿಗಳರ ಪಾಳ್ಯ,ಶಾಂತಿನಗರ, ಅಯ್ಯಪ್ಪನಗರ, ಕೊಡಿಗೇಹಳ್ಳಿ, ಸಾದರಮಂಗಲ – ಇಲ್ಲೆಲ್ಲ ಒಳಚರಂಡಿ ಕಾಮಗಾರಿಗಳು ಶೇ. 70ರಷ್ಟು ಮುಗಿದಿವೆ. ಅಲ್ಲದೆ ಇಲ್ಲೆಲ್ಲ ಕಾವೇರಿ 4ನೇ ಹಂತದ ನೀರು ಒದಗಿಸಲಾಗುವುದು.

ಇವಲ್ಲದೆ ವಾರ್ಡಿನಲ್ಲಿ ಸ್ತ್ರೀಶಕ್ತಿ ಭವನ, ಸಮುದಾಯ ಭವನಗಳ ನಿರ್ಮಾಣ, ರಸ್ತೆ–ಬೀದಿ ದೀಪ–ಚರಂಡಿಗಳ ಅಭಿವೃದ್ಧಿ, ಶಾಲಾ ಕೊಠಡಿಗಳ ನಿರ್ಮಾಣ, ಸಾರ್ವಜನಿಕರ ಸಹಕಾರದೊಂದಿಗೆ ದೇವಾಲಯಗಳ ಅಭಿವೃದ್ಧಿ, ಕೊಳವೆ ಬಾವಿಗಳು, ಹಕ್ಕುಪತ್ರ ವಿತರಣೆ ಮುಂತಾದ ಹಲವು ಅಭಿವೃದ್ಧಿ ಕಾಮಗಾರಿಗಳು ನಡೆದಿವೆ.

| ಹಳ್ಳಿ | ನಿಧಿ ಮೂಲ | ಕಾಮಗಾರಿ | ಮೊತ್ತ (ಲಕ್ಷ ರೂ.) |
|---|---|---|---|
| ಪೂರ್ಣಗೊಂಡ ಕಾಮಗಾರಿಗಳು | | | |
| ಬೆಳತ್ತೂರು | ಬಿ.ಬಿ.ಎಂ.ಪಿ ಬೃಹತ್ ರಸ್ತೆ | ಎನ್.ಹೆಚ್4 ರಸ್ತೆಯಿಂದ ಮೇಡಹಳ್ಳಿ, ಕುರುಡುಸೊನ್ನೇನಹಳ್ಳಿ, ಕೆ.ದೊಮ್ಮಸಂದ್ರ ಮಾರ್ಗ ಬೆಳತ್ತೂರುವರೆಗೆ ರಸ್ತೆ ಅಭಿವೃದ್ಧಿ | 475.00 |
| ಬೆಳತ್ತೂರು | ಬಿ.ಬಿ.ಎಂ.ಪಿ | ಬೆಳತ್ತೂರು ಕಾಲೋನಿಯಲ್ಲಿ ಸಿಮೆಂಟ್ ಕಾಂಕ್ರೀಟ್ ರಸ್ತೆ ಅಭಿವೃದ್ಧಿ ಕಾಮಗಾರಿ. | 20.00 |
| ಬೆಳತ್ತೂರು | ಬಿ.ಬಿ.ಎಂ.ಪಿ | ಸಾಯಿ ಕಾಲೋನಿ ಮತ್ತು ಬೆಳತ್ತೂರು ಕಾಲೋನಿಯಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ (ಪೂರ್ಣಗೊಂಡಿದೆ) | 48.00 |
| ಬೆಳತ್ತೂರು | ಬಿ.ಬಿ.ಎಂ.ಪಿ | ಬೆಳತ್ತೂರುನಿಂದ ಬೆಳತ್ತೂರು ಕಾಲೋನಿವರೆಗೆ ಮತ್ತು ಕುಂಬೇನಗ್ರಹಾರದವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ | 20.00 |
| ಬೆಳತ್ತೂರು | ಬಿ.ಬಿ.ಎಂ.ಪಿ | ಬೆಳತ್ತೂರು ರಸ್ತೆಗಳ ಡಾಂಬರೀಕರಣ ಮತ್ತು ಚರಂಡಿ/ಕಲ್ವರ್ಟ್‌ಗಳ ನಿರ್ಮಾಣ ಕಾಮಗಾರಿ. | 30.00 |
| ಬೆಳತ್ತೂರು | ಬಿ.ಬಿ.ಎಂ.ಪಿ | ಬೆಳತ್ತೂರಿನಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ. | 27.00 |
| ಬೆಳತ್ತೂರು | ಬಿ.ಬಿ.ಎಂ.ಪಿ | ಬೆಳತ್ತೂರು– ಹೈಮಾಸ್ಟ್ ದೀಪ ಅಳವಡಿಕೆ–1 | 7.00 |

| ಹಳ್ಳಿ | ನಿಧಿ ಮೂಲ | ಕಾಮಗಾರಿ | ಮೊತ್ತ (ಲಕ್ಷ ರೂ.) |
|---|---|---|---|
| **ಬೆಳತ್ತೂರು** | ಬಿ.ಬಿ.ಎಂ.ಪಿ | ಬೆಳತ್ತೂರು ಮತ್ತು ಬೆಳತ್ತೂರು ಕಾಲೋನಿಯಲ್ಲಿ ಕೊರೆದಿರುವ ಕೊಳವೆ ಬಾವಿಗಳು –7 | 40.00 |
| **ಬೆಳತ್ತೂರು** | ಬಿ.ಬಿ.ಎಂ.ಪಿ ವಿದ್ಯುತ್ | ಕಾಡುಗೋಡಿ ಬೆಳತ್ತೂರು ರಸ್ತೆಯಲ್ಲಿ ಬೀದಿ ದೀಪಗಳನ್ನು ಅಳವಡಿಸುವ ಕಾಮಗಾರಿ | 30.00 |
| **ಬೆಳತ್ತೂರು** | ಶಿಕ್ಷಣ ಇಲಾಖೆ | ಬೆಳತ್ತೂರು ಕಾಲೋನಿಯಲ್ಲಿ ಶಾಲಾ ಕೊಠಡಿ ನಿರ್ಮಾಣ | 3.30 |
| **ಬೆಳತ್ತೂರು** | ಮುಖ್ಯ ಮಂತ್ರಿಗಳ ಪರಿಹಾರ ನಿಧಿ | ಮಾಸ್ಟರ್ ವಾಸೀಂ ಬಿನ್ ರಹೆಮಾನ್ ಬೆಳತ್ತೂರು ಕಾಲೋನಿ | 0.2 |
| **ಬೈರತಿ/ಬೈರತಿ ಬಂಡೆ** | ಶಾಸಕರ ನಿಧಿ | ಬೈರತಿಯಲ್ಲಿ ಕ್ರಿಶ್ಚಿಯನ್ ಸ್ಮಶಾನಕ್ಕೆ ಕಾಂಪೌಂಡ್ ನಿರ್ಮಾಣ | 5.00 |
| **ಬೈರತಿ/ಬೈರತಿ ಬಂಡೆ** | ಬಿ.ಬಿ.ಎಂ.ಪಿ | ಬೈರತಿ ಗ್ರಾಮದಲ್ಲಿ ಮುಖ್ಯ ರಸ್ತೆ ಮತ್ತು ಅಡ್ಡ ರಸ್ತೆ ಅಭಿವೃದ್ಧಿ | 50.00 |
| **ಬೈರತಿ/ಬೈರತಿ ಬಂಡೆ** | ಬಿ.ಬಿ.ಎಂ.ಪಿ | ಬೈರತಿ ಗ್ರಾಮದಲ್ಲಿ ಪೈಪ್ ಲೈನ್ ಮತ್ತು ಗೇಟ್ ವಾಲ್ವ್ ಅಳವಡಿಸುವುದು. | 7.60 |
| **ಬೈರತಿ/ಬೈರತಿ ಬಂಡೆ** | ಬಿ.ಬಿ.ಎಂ.ಪಿ | ಹೂಡಿ ಉಪವಿಭಾಗ ವ್ಯಾಪ್ತಿಯ, ಹೂಡಿ ವಾರ್ಡ್‌ನ ಬೈರತಿ ಬಿಳಿ ಶಿವಾಲೆ ಮತ್ತು ವಾರಣಾಸಿ ಗ್ರಾಮಗಳಲ್ಲಿ ಪೈಪ್ ಲೈನ್ ಮತ್ತು ಗೇಟ್ ವಾಲ್ವ್‌ಗಳ ದುರಸ್ತಿ ಕಾಮಗಾರಿ. | 3.00 |
| **ಬೈರತಿ/ಬೈರತಿ ಬಂಡೆ** | ಬಿ.ಬಿ.ಎಂ.ಪಿ | ಬೈರತಿ ಮತ್ತು ರಾಮಯ್ಯ ಲೇಔಟ್‌ನಲ್ಲಿ ಹೊಸದಾಗಿ ಕೊರೆದಿರುವ ಕೊಳವೆ ಬಾವಿಗಳಿಗೆ ಪಂಪ್ ಮತ್ತು ಮೋಟಾರ್ ಅಳವಡಿಸಿ ವಿದ್ಯುತ್ ಸಂಪರ್ಕ ಕಲ್ಪಿಸುವುದು. | 10.75 |
| **ಬೈರತಿ/ಬೈರತಿ ಬಂಡೆ** | ಬಿ.ಬಿ.ಎಂ.ಪಿ | ಬೈರತಿ ಗ್ರಾಮದಲ್ಲಿ ಹೊಸದಾಗಿ ಕೊರೆದಿರುವ ಕೊಳವೆ ಬಾವಿಗಳಿಗೆ ಪಂಪ್ ಮತ್ತು ಮೋಟಾರ್ ಅಳವಡಿಸಿ ವಿದ್ಯುತ್ ಸಂಪರ್ಕ ಕಲ್ಪಿಸುವುದು. | 12.60 |
| **ಬೈರತಿ/ಬೈರತಿ ಬಂಡೆ** | ಬಿ.ಬಿ.ಎಂ.ಪಿ | ಬೈರತಿ ಗ್ರಾಮದ ರಾಮಯ್ಯ ಲೇಔಟ್ ಮತ್ತು ಬಸವೇಶ್ವರ ದೇವಸ್ಥಾನದ ಹತ್ತಿರ ಕೊಳವೆ ಬಾವಿ ಕೊರೆಯುವುದು. | 7.60 |

| ಹಳ್ಳಿ | ನಿಧಿ ಮೂಲ | ಕಾಮಗಾರಿ | ಮೊತ್ತ (ಲಕ್ಷ ರೂ.) |
|---|---|---|---|
| ಬೈರತಿ/ಬೈರತಿ ಬಂಡೆ | ಬಿ.ಬಿ.ಎಂ.ಪಿ | ಬೈರತಿ ಗ್ರಾಮದಲ್ಲಿ ಕೊಳವೆ ಬಾವಿ ಕೊರೆಯುವುದು. | 9.50 |
| ಬೈರತಿ/ಬೈರತಿ ಬಂಡೆ | ಬಿ.ಬಿ.ಎಂ.ಪಿ | ಕೊರೆದಿರುವ ಕೊಳವೆ ಬಾವಿಗಳು -7 | 39.00 |
| ಬೈರತಿ/ಬೈರತಿ ಬಂಡೆ | ಬಿ.ಬಿ.ಎಂ.ಪಿ 22.75% | ಬೈರತಿಬಂಡೆ ಗ್ರಾಮದ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ | 10.00 |
| ಬೈರತಿ/ಬೈರತಿ ಬಂಡೆ | ಬಿ.ಬಿ.ಎಂ.ಪಿ 22.75% | ಬೈರತಿ ಗ್ರಾಮದ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ | 10.00 |
| ಬೈರತಿ/ಬೈರತಿ ಬಂಡೆ | ಬಿ.ಡಿ.ಎ | ಬೈರತಿ ಗ್ರಾಮದಲ್ಲಿ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ | 50.00 |
| ಬೈರತಿ/ಬೈರತಿ ಬಂಡೆ | ಬಿ.ಡಿ.ಎ | ಬೈರತಿ ಗ್ರಾಮದಲ್ಲಿ ಡ್ರೈನ್ ಮತ್ತು ಕಲ್ವರ್ಟ ಮತ್ತು ರಸ್ತೆ ನಿರ್ಮಾಣ | 40.00 |
| ಬೈರತಿ/ಬೈರತಿ ಬಂಡೆ | ಬಿ.ಡಿ.ಎ | ಬೈರತಿ ಬಂಡೆ ಗ್ರಾಮದಲ್ಲಿ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ | 40.00 |
| ಬೈರತಿ/ಬೈರತಿ ಬಂಡೆ | ಶಿಕ್ಷಣ ಇಲಾಖೆ | ಬೈರತಿ ಗ್ರಾಮದಲ್ಲಿ ಶಾಲಾ ಕೊಠಡಿ ನಿರ್ಮಾಣ | 3.30 |
| ಬೈರತಿ/ಬೈರತಿ ಬಂಡೆ | ಮುಖ್ಯ ಮಂತ್ರಿಗಳ ಪರಿಹಾರ ನಿಧಿ | ಕು। ಸುಮಿತ ಕುಮಾರ ಬಿನ್ ಆರೋಗ್ಯಸ್ವಾಮಿ ಬೈರತಿ ಎಸ್.ಕೆ ನಗರ | 0.10 |
| ಬೈರತಿ/ಬೈರತಿ ಬಂಡೆ | ಕಂದಾಯ ಇಲಾಖೆ | ಬೈರತಿ ಗ್ರಾಮದ ಸ.ನಂ.81ರಲ್ಲಿ 01.5ಗುಂಟೆ ಜಮೀನನ್ನು ಸ್ಮಶಾನಕ್ಕಾಗಿ ಕಾಯ್ದಿರಿಸಿದೆ.ನಂ.ಎಜಿ. ಜಾದ (ಪೂ) ಸಾ.ಉ. ಸಿಆರ್/159/2009-10, ದಿನಾಂಕ.26.09.2009 | |
| ಸಾದರಮಂಗಲ | ಬಿ.ಎಂ.ಟಿ.ಸಿ | ಕೆ.ಆರ್.ಪುರ- ಅಯ್ಯಪ್ಪನಗರ- ಕೊಡಿಗೇಹಳ್ಳಿ- ಸಾದರಮಂಗಲ (311 ಕೆ) | |
| ಸಾದರ ಮಂಗಲ | ಬಿ.ಬಿ.ಎಂ.ಪಿ | ಸಾದರಮಂಗಲ ಗ್ರಾಮದ ರಸ್ತೆ ಮತ್ತು ಚರಂಡಿ ಅಭಿವೃದ್ಧಿ, ಕಲ್ವರ್ಟ್ಸ್ ನಿರ್ಮಾಣ. | 30.00 |
| ಸಾದರ ಮಂಗಲ | ಬಿ.ಬಿ.ಎಂ.ಪಿ | ಸಾದರಮಂಗಲ ಗ್ರಾಮದ ರಸ್ತೆ ಮತ್ತು ಚರಂಡಿ ನಿರ್ಮಾಣ. | 10.00 |

| ಹಳ್ಳಿ | ನಿಧಿ ಮೂಲ | ಕಾಮಗಾರಿ | ಮೊತ್ತ (ಲಕ್ಷ ರೂ.) |
|---|---|---|---|
| ಸಾದರ ಮಂಗಲ | ಬಿ.ಬಿ.ಎಂ.ಪಿ | ಸಾದರಮಂಗಲ ಗ್ರಾಮದಲ್ಲಿ ಕೊರೆದಿರುವ ಕೊಳವೆ ಬಾವಿಗಳು – 3 | 13.25 |
| ಸಾದರ ಮಂಗಲ | ಬಿ.ಬಿ.ಎಂ.ಪಿ 22.75% | ಸಾದರಮಂಗಲ ಗ್ರಾಮದಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ | 25.00 |
| ಸಾದರ ಮಂಗಲ | ವಸತಿ ಇಲಾಖೆ | ಸಾದರಮಂಗಲದಲ್ಲಿ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯಿಂದ 560 ಮನೆಗಳ ವಸತಿಸಮುಚ್ಚಯ ನಿರ್ಮಾಣ ಕಾಮಗಾರಿ | 600.00 |
| ಸಾದರಮಂಗಲ | ಬಿ.ಬಿ.ಎಂ.ಪಿ ವಿದ್ಯುತ್ | ಸಾದರಮಂಗಲ ಎ.ಕೆ.ಕಾಲೋನಿ ಪ.ಜಾ/ಪ.ಪಂ ಪ್ರದೇಶಗಳಲ್ಲಿ ಬೆಳಕು ಮತ್ತು ವಿದ್ಯುದೀಕರಣ ಕಾಮಗಾರಿ | 7.00 |
| ಸಾದರಮಂಗಲ | ಬಿ.ಬಿ.ಎಂ.ಪಿ ಕೆರೆ | ಸಾದರಮಂಗಲ ಕೆರೆಯ ಸುತ್ತು ತಂತಿ ಬೇಲಿ ನಿರ್ಮಾಣ | 50.00 |
| ಸಾದರಮಂಗಲ | ಕೆ.ಐ.ಎ.ಡಿ.ಬಿ | ಸಾದರಮಂಗಲ ಕೈಗಾರಿಕಾ ಪ್ರದೇಶದಲ್ಲಿ ಬೀದಿ ದೀಪಗಳ ಅಭಿವೃದ್ಧಿ | 26.00 |
| ಬಿಳಿಶಿವಾಲೆ | ಲೋಕೋಪಯೋಗಿ ಇಲಾಖೆ | ಬಿಳಿಶಿವಾಲೆ ಯಿಂದ ದೊಡ್ಡಗುಬ್ಬಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ | 165.00 |
| ಬಿಳಿಶಿವಾಲೆ | ಬಿ.ಬಿ.ಎಂ.ಪಿ | ಬಿಳಿಶಿವಾಲೆ ಗ್ರಾಮದಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ | 20.00 |
| ಬಿಳಿಶಿವಾಲೆ | ಬಿ.ಬಿ.ಎಂ.ಪಿ | ಬಿಳಿ ಶಿವಾಲೆ ಗ್ರಾಮದಲ್ಲಿ ಮುಖ್ಯ ರಸ್ತೆ ಮತ್ತು ಅಡ್ಡ ರಸ್ತೆ ಅಭಿವೃದ್ಧಿ | 49.30 |
| ಬಿಳಿಶಿವಾಲೆ | ಬಿ.ಬಿ.ಎಂ.ಪಿ | ಬೈರತಿ ಬಿಳಿ ಶಿವಾಲೆ ಗ್ರಾಮದಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ | 20.00 |
| ಬಿಳಿಶಿವಾಲೆ | ಬಿ.ಬಿ.ಎಂ.ಪಿ | ಬಿಳಿ ಶಿವಾಲೆ ಗ್ರಾಮದಲ್ಲಿ ಪೈಪ್ ಲೈನ್ ಮತ್ತು ಗೇಟ್ ವಾಲ್ವ್ ಅಳವಡಿಸುವುದು. | 5.75 |
| ಬಿಳಿಶಿವಾಲೆ | ಬಿ.ಬಿ.ಎಂ.ಪಿ | ಬಿಳಿಶಿವಾಲೆ ಹನುಮಂತನಗರದಲ್ಲಿ ಡ್ರೈನ್ ಮತ್ತು ಕಲ್ವರ್ಟ ಮತ್ತು ರಸ್ತೆ ನಿರ್ಮಾಣ | 20.00 |
| ಬಿಳಿಶಿವಾಲೆ | ಬಿ.ಬಿ.ಎಂ.ಪಿ | ಹೈಮಾಸ್ಟ್ ದೀಪ ಅಳವಡಿಕೆ –1 | 20.00 |
| ಬಿಳಿಶಿವಾಲೆ | ಬಿ.ಬಿ.ಎಂ.ಪಿ | ಬಿಳಿಶಿವಾಲೆ ಕೊರೆದಿರುವ ಕೊಳವೆ ಬಾವಿಗಳು 6 | 28.25 |

| ಹಳ್ಳಿ | ನಿಧಿ ಮೂಲ | ಕಾಮಗಾರಿ | ಮೊತ್ತ (ಲಕ್ಷ ರೂ.) |
|---|---|---|---|
| ಬಿಳಿಶಿವಾಲೆ | ಬಿ.ಬಿ.ಎಂ.ಪಿ 22.75% | ಬಿಳಿಶಿವಾಲೆ ಗ್ರಾಮದ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ | 10.00 |
| ಬಿಳಿಶಿವಾಲೆ | ಬಿ.ಡಿ.ಎ | ಬಿಳಿಶಿವಾಲೆ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ | 40.00 |
| ಬಿಳಿಶಿವಾಲೆ | ಬಿ.ಡಿ.ಎ | ಬಿಳಿಶಿವಾಲೆ ಗ್ರಾಮದಲ್ಲಿ ಡ್ರೈನ್ ಮತ್ತು ಕಲ್ವರ್ಟ ಮತ್ತು ರಸ್ತೆ ನಿರ್ಮಾಣ | 10.00 |
| ಬಿಳಿಶಿವಾಲೆ | ಶಿಕ್ಷಣ ಇಲಾಖೆ | ಸ.ಕ.ಹಿ.ಪ್ರಾ.ಶಾಲೆ, ಬಿಳಿಶಿವಾಲೆ 2 ಶಾಲಾ ಕೊಠಡಿ ನಿರ್ಮಾಣ | 6.60 |
| ಬಿಳಿಶಿವಾಲೆ | ಮುಜರಾಯಿ ಇಲಾಖೆ | ಬಿಳಿಶಿವಾಲೆ ಗಂಗಮ್ಮ ದೇವಾಲಯ ಅಭಿವೃದ್ಧಿ ಕಾಮಗಾರಿ | 0.50 |
| ಬಿಳಿಶಿವಾಲೆ | ಮುಜರಾಯಿ ಇಲಾಖೆ | ಬಿಳಿಶಿವಾಲೆ ಮಾರಮ್ಮ ದೇವಿ ದೇವಾಲಯ ಅಭಿವೃದ್ಧಿ ಕಾಮಗಾರಿ | 0.50 |
| ಬಿಳಿಶಿವಾಲೆ | ಗ್ರಂಥಾಲಯ ಇಲಾಖೆ | ಸಾರ್ವಜನಿಕ ಗ್ರಂಥಾಲಯ ಮಂಜೂರಾಗಿದೆ | 10.00 |
| ವಾರಣಾಸಿ | ಬಿ.ಬಿ.ಎಂ.ಪಿ ಬೃಹತ್ ರಸ್ತೆ | ಟಿಸಿ ಪಾಳ್ಯ ಮುಖ್ಯ ರಸ್ತೆಯಿಂದ ವಾರಣಾಸಿ ಮಾರ್ಗ ಕೆ ಚನ್ನಸಂದ್ರ ಸೇರುವ ರಸ್ತೆ | 300.00 |
| ವಾರಣಾಸಿ | ಬಿ.ಬಿ.ಎಂ.ಪಿ | ವಾರಣಾಸಿ ಗ್ರಾಮದಲ್ಲಿ ಮುಖ್ಯ ರಸ್ತೆ ಮತ್ತು ಅಡ್ಡ ರಸ್ತೆ ಅಭಿವೃದ್ಧಿ | 49.90 |
| ವಾರಣಾಸಿ | ಬಿ.ಬಿ.ಎಂ.ಪಿ | ವಾರಣಾಸಿಯ ಮದರ್ ತೆರೇಸಾ ರಸ್ತೆಯಲ್ಲಿ ಕಲ್ವರ್ಟ, ಚರಂಡಿ ನಿರ್ಮಾಣ ಮತ್ತು ರಸ್ತೆ ಅಭಿವೃದ್ಧಿ | 15.00 |
| ವಾರಣಾಸಿ | ಬಿ.ಬಿ.ಎಂ.ಪಿ | ವಾರಣಾಸಿ ಗ್ರಾಮದ ಸ್ಮಶಾನ ಅಭಿವೃದ್ಧಿ ಕಾಮಗಾರಿ | 15.00 |
| ವಾರಣಾಸಿ | ಬಿ.ಬಿ.ಎಂ.ಪಿ | ವಾರಣಾಸಿ ಕನಕದಾಸ ಮುಖ್ಯ ರಸ್ತೆಯಲ್ಲಿ ಚರಂಡಿ ನಿರ್ಮಾಣ ಮತ್ತು ರಸ್ತೆ ಅಭಿವೃದ್ಧಿ ಕಾಮಗಾರಿ | 34.00 |
| ವಾರಣಾಸಿ | ಬಿ.ಬಿ.ಎಂ.ಪಿ | ವಾರಣಾಸಿ ರಾಜರಾಜೇಶ್ವರಿ ಬಡಾವಣೆಯ (ಹೂವಿನತೋಟ) ಸಿಮೆಂಟ್ ಚರಂಡಿ ಅಭಿವೃದ್ಧಿ ಕಾಮಗಾರಿ | 20.00 |
| ವಾರಣಾಸಿ | ಬಿ.ಬಿ.ಎಂ.ಪಿ | ವಾರಣಾಸಿ ಕೊರೆದಿರುವ ಕೊಳವೆ ಬಾವಿಗಳು ಮತ್ತು ಪೈಪ್ ಲೈನ್ ಅಳವಡಿಸಿ ನೀರು ಸರಬರಾಜು –6 | 38.00 |

| ಹಳ್ಳಿ | ನಿಧಿ ಮೂಲ | ಕಾಮಗಾರಿ | ಮೊತ್ತ (ಲಕ್ಷ ರೂ.) |
|---|---|---|---|
| **ವಾರಣಾಸಿ** | ಬಿ.ಡಿ.ಎ | ವಾರಣಾಸಿ, ಆನಂದಪುರ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳಲ್ಲಿ ಟಿ.ಸಿ.ಪಾಳ್ಯದವರೆಗೆ ಚಪ್ಪಡಿ ಚರಂಡಿ ಮತ್ತು ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ ಕೆಲಸ | 100.00 |
| **ವಾರಣಾಸಿ** | ಬಿ.ಡಿ.ಎ | ವಾರಣಾಸಿ ಗ್ರಾಮದ ಅಡ್ಡರಸ್ತೆ ಮತ್ತು ಮದರ್ ತೆರೆಸಾ ಶಾಲೆ ಸುತ್ತಮುತ್ತ ಪ್ರದೇಶದ ಅಡ್ಡರಸ್ತೆಗಳಲ್ಲಿ ಚಪ್ಪಡಿ ಚರಂಡಿ ಮತ್ತು ರಸ್ತೆ ಅಭಿವೃದ್ಧಿ ಕೆಲಸ | 100.00 |
| **ವಾರಣಾಸಿ** | ಬಿ.ಡಿ.ಎ | ರಾಜೇಶ್ವರಿ ಬಡಾವಣೆಯಲ್ಲಿ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ(ಬಿ.ಡಿ.ಎ ವತಿಯಿಂದ) | 50.00 |
| **ವಾರಣಾಸಿ** | ಮುಖ್ಯ ಮಂತ್ರಿಗಳ ಪರಿಹಾರ ನಿಧಿ | ನಾಗವೇಣಿ ಕೋಂ ಜಿ. ಮರಿಯಪ್ಪ ವಾರಣಾಸಿ | 0.20 |
| **ಅಯ್ಯಪ್ಪನಗರ** | ಶಾಸಕರ ನಿಧಿ | ಅಯ್ಯಪ್ಪನಗರ ಕೊಡವ ಸಮಾಜದ ಸಮುದಾಯ ಭವನ ನಿರ್ಮಾಣಕ್ಕಾಗಿ | 10.00 |
| **ಅಯ್ಯಪ್ಪನಗರ** | ಬಿ.ಬಿ.ಎಂ.ಪಿ | ಹೂಡಿ ರೈಲ್ವೆ ಗೇಟ್‌ನಿಂದ ಅಯ್ಯಪ್ಪನಗರದವರೆಗೆ ರಸ್ತೆ ಕಾಮಗಾರಿ | 98.00 |
| **ಅಯ್ಯಪ್ಪನಗರ** | ಬಿ.ಬಿ.ಎಂ.ಪಿ | ಅಯ್ಯಪ್ಪನಗರ 2ನೇ ಬ್ಲಾಕಿನ ಓಂ ಶಕ್ತಿ ಬಡಾವಣೆಯಲ್ಲಿ ಚರಂಡಿ, ಅಡಿಗಾಲುವೆ ಹಾಗೂ ರಸ್ತೆ ನಿರ್ಮಾಣ ಕಾಮಗಾರಿ | 12.00 |
| **ಅಯ್ಯಪ್ಪನಗರ** | ಬಿ.ಬಿ.ಎಂ.ಪಿ | ಅಯ್ಯಪ್ಪನಗರ ಬಡಾವಣೆಯಲ್ಲಿ ಹೂಳೆತ್ತುವುದು, ಕಲ್ಲು ಚಪ್ಪಡಿ ಮೋರಿಗಳ ಪುನರ್ ನಿರ್ಮಾಣ, ಅಡಿಗಾಲುವೆ ಹಾಗೂ ಕಲ್ಲು ಚಪ್ಪಡಿ ಮತ್ತು ಕಲ್ಲು ಕಟ್ಟಡ ಚರಂಡಿ ನಿರ್ಮಾಣ | 22.00 |
| **ಅಯ್ಯಪ್ಪನಗರ** | ಬಿ.ಬಿ.ಎಂ.ಪಿ | ಹೂಡಿ ಸ್ಮಶಾನದಿಂದ ಅಯ್ಯಪ್ಪನಗರದವರೆಗೆ ಕಲ್ಲು ಚಪ್ಪಡಿ ಚರಂಡಿ ನಿರ್ಮಾಣ | 22.00 |
| **ಅಯ್ಯಪ್ಪನಗರ** | ಬಿ.ಬಿ.ಎಂ.ಪಿ | ಹೂಡಿ ರೈಲ್ವೆ ಸೇತುವೆ ಜಂಕ್ಷನ್ ಬಳಿ ಹೈಮಾಸ್ಟ್ ದೀಪ ಅಳವಡಿಕೆ | 4.00 |
| **ಅಯ್ಯಪ್ಪನಗರ** | ಬಿ.ಬಿ.ಎಂ.ಪಿ | ಅಯ್ಯಪ್ಪನಗರ– ಕೊರೆದಿರುವ ಕೊಳವೆ ಬಾವಿಗಳು –4 | 20.00 |

| ಹಳ್ಳಿ | ನಿಧಿ ಮೂಲ | ಕಾಮಗಾರಿ | ಮೊತ್ತ (ಲಕ್ಷ ರೂ.) |
|---|---|---|---|
| ಅಯ್ಯಪ್ಪನಗರ | ಬಿ.ಬಿ.ಎಂ.ಪಿ ವಿದ್ಯುತ್ | ಅಯ್ಯಪ್ಪನಗರ ಪ್ರದೇಶದಲ್ಲಿ ಬೀದಿ ದೀಪಗಳು, ಕಂಟ್ರೋಲ್ ಲೈನ್‌ಗಳ ಬದಲಾಯಿಸುವ ಕಾಮಗಾರಿ | 27.00 |
| ಅಯ್ಯಪ್ಪನಗರ | ಬಿ.ಬಿ.ಎಂ.ಪಿ 22.75% | ಅಯ್ಯಪ್ಪನಗರದಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ | 15.00 |
| ಅಯ್ಯಪ್ಪನಗರ | ಬಿ.ಎಂ.ಟಿ.ಸಿ | ಕೆ.ಆರ್.ಪುರ ರೈಲ್ವೇ ನಿಲ್ದಾಣದಿಂದ–ಮಹದೇವಪುರ–ಹೂಡಿ–ಅಯ್ಯಪ್ಪನಗರ (504 ಬಿ) | |
| ಅಯ್ಯಪ್ಪನಗರ | ಬಿ.ಡಿ.ಎ | ಅಯ್ಯಪ್ಪ ನಗರದ 1 ಮತ್ತು 2ನೇ ಬ್ಲಾಕ್‌ಗಳ ರಸ್ತೆಗಳ ಡಾಂಬರೀಕರಣ | 90.00 |
| ಅಯ್ಯಪ್ಪನಗರ | ಬಿ.ಡಿ.ಎ | ಅಯ್ಯಪ್ಪ ನಗರದ 3ನೇ ಬ್ಲಾಕ್‌ಗಳ ರಸ್ತೆಗಳ ಡಾಂಬರೀಕರಣ | 70.00 |
| ಅಯ್ಯಪ್ಪನಗರ | ಬಿ.ಡಿ.ಎ | ಅಯ್ಯಪ್ಪ ನಗರದ 4ನೇ ಬ್ಲಾಕ್‌ಗಳ ರಸ್ತೆಗಳ ಡಾಂಬರೀಕರಣ | 80.00 |
| ಅಯ್ಯಪ್ಪನಗರ | ಮಹಿಳಾ ಮತ್ತು ಮಕ್ಕಳ ಕಲ್ಯಾಣ | ಅಯ್ಯಪ್ಪನಗರದಲ್ಲಿ 2009–10 ನೇ ಸಾಲಿನಿಂದ ಹೊಸದಾಗಿ ಅಂಗನವಾಡಿ ಸ್ಥಾಪನೆ | |
| ರಾಜಪಾಳ್ಯ | ಬಿ.ಬಿ.ಎಂ.ಪಿ | ರಾಜಪಾಳ್ಯದಲ್ಲಿ ಹೈಮಾಸ್ಟ್ ದೀಪ ಅಳವಡಿಕೆ | 6.00 |
| ರಾಜಪಾಳ್ಯ | ಬಿ.ಬಿ.ಎಂ.ಪಿ | ರಾಜಪಾಳ್ಯದಲ್ಲಿ ಕೊರೆದಿರುವ ಕೊಳವೆ ಬಾವಿಗಳು –2 | 10.00 |
| ರಾಜಪಾಳ್ಯ | ಬಿ.ಡಿ.ಎ | ರಾಜಪಾಳ್ಯ ಮುಖ್ಯರಸ್ತೆ ಅಭಿವೃದ್ಧಿ ಮತ್ತು ಚರಂಡಿ ನಿರ್ಮಾಣ. | 50.00 |
| ಹೂಡಿ | ಬಿ.ಬಿ.ಎಂ.ಪಿ ವಿದ್ಯುತ್ | ವಾರ್ಡ್‌ನಂ.43 ಹೂಡಿಯ ವಾರ್ಡ್‌ನಲ್ಲಿ ವಂಚಿತರಾದ ವರ್ಗ ಮತ್ತು ಕೊಳಚೆ ಪ್ರದೇಶಗಳಲ್ಲಿ ಬೆಳಕು ಮತ್ತು ವಿದ್ಯುದೀಕರಣ ಮಾಡುವುದು. | 2.00 |
| ಹೂಡಿ | ಬಿ.ಬಿ.ಎಂ.ಪಿ ವಿದ್ಯುತ್ | ವಾರ್ಡ್ ನಂ.43ರ ಹೂಡಿಯಲ್ಲಿ ರಸ್ತೆ ಬೆಳಕಿನ ವ್ಯವಸ್ಥೆಯಲ್ಲಿ ಹೆಚ್ಚುವರಿ ಬೀದಿ ದೀಪ ವಿದ್ಯುತ್ ಕಂಬಗಳು, ಕೇಬಲ್‌ಗಳು, ಒದಗಿಸುವುದು. | 11.00 |
| ಹೂಡಿ | ಬಿ.ಬಿ.ಎಂ.ಪಿ ವಿದ್ಯುತ್ | ವಾರ್ಡ್ ನಂ.54 ರ ಬಡಾವಣೆಯ ರಸ್ತೆಗಳಿಗೆ ಬೀದಿ ದೀಪಗಳನ್ನು ಅಳವಡಿಸುವ ಕಾಮಗಾರಿ | 5.00 |

| ಹಳ್ಳಿ | ನಿಧಿ ಮೂಲ | ಕಾಮಗಾರಿ | ಮೊತ್ತ (ಲಕ್ಷ ರೂ.) |
|---|---|---|---|
| **ಹೂಡಿ** | ಬಿ.ಬಿ.ಎಂ.ಪಿ ವಿದ್ಯುತ್ | ವಾರ್ಡ್ ನಂ.54 ರ ಕಂಟ್ರೋಲ್ ಲೈನ್‌ಗಳು, ಸ್ವಯಂಚಾಲಿತ ಸ್ವಿಚ್‌ಗಳು, ಮತ್ತು ಹೆಚ್ಚುವರಿ ಬೀದಿ ದೀಪಗಳನ್ನು ಅಳವಡಿಸುವ ಕಾಮಗಾರಿ | 5.00 |
| **ಹೂಡಿ** | ಬಿ.ಬಿ.ಎಂ.ಪಿ ವಿದ್ಯುತ್ | ವಾರ್ಡ್ ನಂ.54 ರ ರಸ್ತೆಗಳಿಗೆ ಬೀದಿ ದೀಪಗಳನ್ನು ಅಳವಡಿಸುವ ಕಾಮಗಾರಿ | 10.00 |
| **ಹೂಡಿ** | ಬಿ.ಬಿ.ಎಂ.ಪಿ ವಿದ್ಯುತ್ | ಹೂಡಿ ವಾರ್ಡ್ ಪ್ರದೇಶದಲ್ಲಿ ಬೀದಿ ದೀಪಗಳನ್ನು ಅಳವಡಿಸುವ ಕಾಮಗಾರಿ | 22.00 |
| **ಹೂಡಿ** | ಬಿ.ಬಿ.ಎಂ.ಪಿ ವಿದ್ಯುತ್ | ಹೂಡಿ ವಾರ್ಡ್ ಪ್ರದೇಶದಲ್ಲಿ ಹೆಚ್ಚುವರಿ ಬೀದಿ ದೀಪ, ಕಂಟ್ರೋಲ್ ಲೈನ್‌ಗಳನ್ನು ಅಳವಡಿಸುವ ಕಾಮಗಾರಿ | 39.00 |
| **ಹೂಡಿ** | ಬಿ.ಬಿ.ಎಂ.ಪಿ ವಿದ್ಯುತ್ | ಹೂಡಿ ಯಿಂದ ಕುರುಡುಸೊಣ್ಣೇನಹಳ್ಳಿ ರವರೆಗೆನ ಬೀದಿ ದೀಪಗಳನ್ನು ಅಳವಡಿಸುವ ಕಾಮಗಾರಿ | 4.50 |
| **ಹೂಡಿ** | ಬಿ.ಬಿ.ಎಂ.ಪಿ ಕೆರೆ | ಹೂಡಿ ಕೆರೆ –1 ಸುತ್ತು ತಂತಿ ಬೇಲಿ ನಿರ್ಮಾಣ | 45.00 |
| **ಹೂಡಿ** | ಬಿ.ಬಿ.ಎಂ.ಪಿ ಕೆರೆ | ಹೂಡಿ ಕೆರೆ –2 ಸುತ್ತು ತಂತಿ ಬೇಲಿ ನಿರ್ಮಾಣ | 45.00 |
| **ಹೂಡಿ** | ಬಿ.ಎಂ.ಟಿ.ಸಿ | ಕೆಂಪೇಗೌಡ ಬಸ್ ನಿಲ್ದಾಣದಿಂದ–ಹೂಡಿ ಗ್ರಾಮ(304 ಬಿ) | |
| **ಹೂಡಿ** | ಬಿ.ಎಂ.ಟಿ.ಸಿ | ಕೆಂ.ಬ.ನಿಲ್ದಾಣ– ಹೂಡಿ–ಐ.ಟಿ.ಪಿ.ಎಲ್ (319 ಸಿ) ವೋಲ್ವೋ | |
| **ಹೂಡಿ** | ಮುಖ್ಯ ಮಂತ್ರಿಗಳ ಪರಿಹಾರ ನಿಧಿ | ಜಿ.ಕೆ ಮಿಶ್ರಾ ಹೂಡಿ | 0.15 |
| **ಹೂಡಿ** | ಮುಖ್ಯ ಮಂತ್ರಿಗಳ ಪರಿಹಾರ ನಿಧಿ | ಜಿ.ಕೆ ಮಿಶ್ರಾ ಹೂಡಿ | 0.15 |
| **ಹೂಡಿ** | ಇಂಧನ | ಇ.ಪಿ.ಐ.ಪಿ ಪ್ರದೇಶದಲ್ಲಿ ಉತ್ತಮ ವಿದ್ಯುತ್ ಒದಗಿಸಲು ಹೂಡಿ 220/66/11 ಕೆ.ವಿ ಸ್ಥಾವರದಲ್ಲಿ 20 ಎಂ.ವಿ.ಎ ಟ್ರಾನ್ಸ್‌ಫಾರ್ಮರ್ ಅನ್ನು 31.5 ಎಂ.ವಿ.ಎ ಹೆಚ್ಚಿಸಿದೆ | 135.00 |

| ಹಳ್ಳಿ | ನಿಧಿ ಮೂಲ | ಕಾಮಗಾರಿ | ಮೊತ್ತ (ಲಕ್ಷ ರೂ.) |
|---|---|---|---|
| **ಹೂಡಿ** | ಇಂಧನ | ಹೂಡಿ 220/66/11 ಕೆ.ವಿ ಸ್ಥಾವರದಿಂದ 3.5 ಕಿ.ಮೀ ದೂರದ ಇ.ಪಿ.ಐ.ಪಿ 66/11 ಕೆ.ವಿ ಸ್ಥಾವರದವರೆಗೆ 66 ಕೆ.ವಿ ಭೂಗತ ಕೇಬಲ್ ಅಳವಡಿಕೆ | 50.00 |
| **ಹೂಡಿ** | ಬಿ.ಬಿ.ಎಂ.ಪಿ | ಹೂಡಿ ಗ್ರಾಮದ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ | 19.00 |
| **ಹೂಡಿ** | ಬಿ.ಬಿ.ಎಂ.ಪಿ | ಐಟಿಪಿಎಲ್ ರಸ್ತೆಯಿಂದ ಹೂಡಿ ರೈಲ್ವೆ ಕ್ರಾಸಿಂಗ್‌ವರೆಗೆ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ | 60.00 |
| **ಹೂಡಿ** | ಬಿ.ಬಿ.ಎಂ.ಪಿ | ಹೂಡಿ ಗ್ರಾಮದ ಚರಂಡಿಗಳಿಗೆ ಕಲ್ವರ್ಟ್ ನಿರ್ಮಾಣ. | 5.00 |
| **ಹೂಡಿ** | ಬಿ.ಬಿ.ಎಂ.ಪಿ | ಹೂಡಿಯಲ್ಲಿ ಕ್ರಾಸ್ ರಸ್ತೆ ಮತ್ತು ಚರಂಡಿ ಅಭಿವೃದ್ಧಿ | 50.00 |
| **ಹೂಡಿ** | ಬಿ.ಬಿ.ಎಂ.ಪಿ | ಹೂಡಿಯ ಶಾಂತಿನಗರ ಸಿ.ಸಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ | 10.00 |
| **ಹೂಡಿ** | ಬಿ.ಬಿ.ಎಂ.ಪಿ | ಹೂಡಿಯ ಮುನಿರಾಮಯ್ಯ ಕಾಲೋನಿಯ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ | 10.00 |
| **ಹೂಡಿ** | ಬಿ.ಬಿ.ಎಂ.ಪಿ | ಹೂಡಿ ಗ್ರಾಮದ ಸುಬ್ಬಣ್ಣ ಬಡಾವಣೆಯಲ್ಲಿ ರಸ್ತೆಗಳು ಮತ್ತು ಚರಂಡಿ ಅಭಿವೃದ್ಧಿ ಕಾಡುಗೋಡಿ ಗ್ರಾಮದ ಉಳಿದ ರಸ್ತೆಗಳ ಅಭಿವೃದ್ಧಿ | 15.00 |
| **ಹೂಡಿ** | ಬಿ.ಬಿ.ಎಂ.ಪಿ | ರೈಲ್ವೆ ಗೇಟ್ ಬಳಿ ಹೈಮಾಸ್ ದೀಪ ಅಳವಡಿಸಿದೆ | 7.00 |
| **ಹೂಡಿ** | ಬಿ.ಬಿ.ಎಂ.ಪಿ | ಹೂಡಿ – ಕೊರೆದಿರುವ ಕೊಳವೆ ಬಾವಿಗಳು –6 | 30.00 |
| **ಹೂಡಿ** | ಬಿ.ಬಿ.ಎಂ.ಪಿ ವಿದ್ಯುತ್ | ವಾರ್ಡ್ ನಂ.54 ಹೂಡಿ ವಾರ್ಡ್‌ನಲ್ಲಿ ಸ್ಟ್ರಿಂಗಿಂಗ್ ನಿಯಂತ್ರಣ ಲೈನ್‌ಗಳ ಬೀದಿ ದೀಪಗಳನ್ನು ಅಳವಡಿಸುವ ಕಾಮಗಾರಿ | 12.00 |
| **ಹೂಡಿ** | ಬಿ.ಬಿ.ಎಂ.ಪಿ 22.75% | ಹೂಡಿ– ಶಾಂತಿನಗರದ ಕಾಂಕ್ರೀಟ್ ರಸ್ತೆ ಕಾಮಗಾರಿ | 10.00 |
| **ಹೂಡಿ** | ಬಿ.ಬಿ.ಎಂ.ಪಿ 22.75% | ಹೂಡಿ ವಾರ್ಡಿನ ಎಸ್.ಸಿ./ಎಸ್.ಟಿ. ಯವರಿಗೆ ಶೌಚಾಲಯ ನಿರ್ಮಾಣ | 10.00 |

| ಹಳ್ಳಿ | ನಿಧಿ ಮೂಲ | ಕಾಮಗಾರಿ | ಮೊತ್ತ (ಲಕ್ಷ ರೂ.) |
|---|---|---|---|
| **ಹೂಡಿ** | ಬಿ.ಡಿ.ಎ | ಅನೂಪ್ ಲೇಔಟ್ ರಸ್ತೆಗಳ ಡಾಂಬರೀಕರಣ | 60.00 |
| **ಹೂಡಿ** | ಮುಜರಾಯಿ ಇಲಾಖೆ | ಹೂಡಿ ಲಕ್ಷ್ಮಿವೆಂಕಟೇಶ್ವರ ದೇವಾಲಯ ಅಭಿವೃದ್ಧಿ ಕಾಮಗಾರಿ | 5.00 |
| **ಕೊಡಿಗೇಹಳ್ಳಿ** | ಮುಖ್ಯ ಮಂತ್ರಿಗಳ ಪರಿಹಾರ ನಿಧಿ | ಸುಧಾ ಕೋಂ ನಾಗರಾಜ ಕೊಡಿಗೆಹಳ್ಳಿ | 0.50 |
| **ಕೊಡಿಗೇಹಳ್ಳಿ** | ಬಿ.ಬಿ.ಎಂ.ಪಿ ವಿದ್ಯುತ್ | ಹೂಡಿ ಯಿಂದ ಕೊಡಿಗೇಹಳ್ಳಿ (ಕ್ರಿಸ್ಟಾಲ್ ಅಪಾರ್ಟ್‌ಮೆಂಟ್ ಹತ್ತಿರ) ರವರೆಗೆನ ಬೀದಿ ದೀಪಗಳನ್ನು ಅಳವಡಿಸುವ ಕಾಮಗಾರಿ | 2.50 |
| **ಕೊಡಿಗೇಹಳ್ಳಿ** | ಬಿ.ಬಿ.ಎಂ.ಪಿ | ಕೊಡಿಗೇಹಳ್ಳಿ ವಯಾ ಕ್ರಿಸ್ಟಲ್ ಅಪಾರ್ಟ್‌ಮೆಂಟ್ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ. | 30.00 |
| **ಕೊಡಿಗೇಹಳ್ಳಿ** | ಬಿ.ಬಿ.ಎಂ.ಪಿ | ಕೊಡಿಗೇಹಳ್ಳಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ. | 30.00 |
| **ಕೊಡಿಗೇಹಳ್ಳಿ** | ಬಿ.ಬಿ.ಎಂ.ಪಿ | ಕೊಡುಗೇಹಳ್ಳಿ ಸ್ಮಶಾನಕ್ಕೆ ಕಾಂಪೌಂಡ್ ನಿರ್ಮಾಣ | 8.00 |
| **ಕೊಡಿಗೇಹಳ್ಳಿ** | ಬಿ.ಬಿ.ಎಂ.ಪಿ | ಕೊಡಿಗೇಹಳ್ಳಿ ಗ್ರಾಮದಲ್ಲಿ ಕೊರೆದಿರುವ ಕೊಳವೆ ಬಾವಿಗಳು -2 | 11.40 |
| **ಕೊಡಿಗೇಹಳ್ಳಿ** | ಬಿ.ಬಿ.ಎಂ.ಪಿ | ಕೊಡಿಗೇಹಳ್ಳಿ- ಹೈಮಾಸ್ಟ್ ದೀಪ ಅಳವಡಿಕೆ | 7.00 |
| **ಕೊಡಿಗೇಹಳ್ಳಿ** | ಬಿ.ಡಿ.ಎ | ಕೊಡಿಗೇಹಳ್ಳಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ. | 30.00 |
| **ಕೊಡಿಗೇಹಳ್ಳಿ** | ಬಿ.ಡಿ.ಎ | ಕೊಡಿಗೇಹಳ್ಳಿ ಮುಖ್ಯರಸ್ತೆಯಿಂದ ಸಾದರಮಂಗಲ ಮುನೇಶ್ವರ ದೇವಸ್ಥಾನದ ವೃತ್ತದವರೆಗೆ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ | 100.00 |
| **ತಿಗಳರಪಾಳ್ಯ** | ಬಿ.ಬಿ.ಎಂ.ಪಿ | ತಿಗಳರಪಾಳ್ಯ- ಹೈಮಾಸ್ಟ್ ದೀಪ ಅಳವಡಿಕೆ | 7.00 |
| **ತಿಗಳರಪಾಳ್ಯ** | ಬಿ.ಬಿ.ಎಂ.ಪಿ | ತಿಗಳರಪಾಳ್ಯ- ಕೊರೆದಿರುವ ಕೊಳವೆ ಬಾವಿಗಳು -3 | 15.00 |
| **ತಿಗಳರಪಾಳ್ಯ** | ಬಿ.ಬಿ.ಎಂ.ಪಿ 22.75% | ತಿಗಳರಪಾಳ್ಯದ ರಸ್ತೆ ಮತ್ತು ಚರಂಡಿ ಅಭಿವೃದ್ಧಿ | 10.00 |

| ಹಳ್ಳಿ | ನಿಧಿ ಮೂಲ | ಕಾಮಗಾರಿ | ಮೊತ್ತ (ಲಕ್ಷ ರೂ.) |
|---|---|---|---|
| **ತಿಗಳರಪಾಳ್ಯ** | ಬಿ.ಬಿ.ಎಂ.ಪಿ ಮಳೆ ನೀರು ಕಾಲುವೆ | ತಿಗಳರಪಾಳ್ಯದಲ್ಲಿ ಮಳೆ ನೀರು ಕಾಲುವೆ ನಿರ್ಮಾಣ | 45.00 |
| **ತಿಗಳರಪಾಳ್ಯ** | ಬಿ.ಡಿ.ಎ | ತಿಗಳರಪಾಳ್ಯದಲ್ಲಿ ಸ್ಟಾರ್ಮ್ ವಾಟರ್ ಡ್ರೈನೇಜ್ ನಿರ್ಮಾಣ | 75.00 |
| **ತಿಗಳರಪಾಳ್ಯ** | ಬಿ.ಡಿ.ಎ | ತಿಗಳರಪಾಳ್ಯದಲ್ಲಿನ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳ ಚರಂಡಿ ನಿರ್ಮಾಣ ಮತ್ತು ರಸ್ತೆ ಡಾಂಬರೀಕರಣ | 75.00 |
| **ತಿಗಳರಪಾಳ್ಯ** | ಬಿ.ಬಿ.ಎಂ.ಪಿ ವಿದ್ಯುತ್ | ಎ.ಕೆ.ಕಾಲೋನಿ, ತಿಗಳರಪಾಳ್ಯದಲ್ಲಿ ಬೆಳಕು ಮತ್ತು ವಿದ್ಯುದೀಕರಣ ಮಾಡುವ ಕಾಮಗಾರಿ | 4.00 |

## ಮಂಜೂರಾದ ಕಾಮಗಾರಿಗಳು

| | | | |
|---|---|---|---|
| **ಬೆಳತ್ತೂರು** | ಬಿ.ಬಿ.ಎಂ.ಪಿ | ಬೆಳತ್ತೂರು ಅಂಗನವಾಡಿ ಕಟ್ಟಡ ನಿರ್ಮಾಣ | 9.00 |
| **ಸಾದರ ಮಂಗಲ** | ಬಿ.ಬಿ.ಎಂ.ಪಿ | ಸಾದರಮಂಗಲ ರಸ್ತೆ ಅಭಿವೃದ್ಧಿ ಮತ್ತು ಚರಂಡಿ ನಿರ್ಮಾಣ. | 50.00 |
| **ಸಾದರ ಮಂಗಲ** | ಬಿ.ಬಿ.ಎಂ.ಪಿ 22.75% | ಸಾದರಮಂಗಲ ಗ್ರಾಮದಲ್ಲಿ ಸಮುದಾಯ ಭವನ ನಿರ್ಮಾಣ | 80.00 |
| **ಸಾದರ ಮಂಗಲ** | ಬಿ.ಬಿ.ಎಂ.ಪಿ ಯೋಜನೆ | ಸಾದರಮಂಗಲದಲ್ಲಿ ವಿದ್ಯುತ್ ಚಿತಾಗಾರ ನಿರ್ಮಾಣ | 339.00 |
| **ಬಿಳಿಶಿವಾಲೆ** | ಬಿ.ಬಿ.ಎಂ.ಪಿ ಬೃಹತ್ ರಸ್ತೆ | ಬಿಳಿಶಿವಾಲೆ ರಸ್ತೆಯಿಂದ ಕೆ.ಚನ್ನಸಂದ್ರದವರೆಗೆ ರಸ್ತೆ ಅಭಿವೃದ್ಧಿ | 150.00 |
| **ಅಯ್ಯಪ್ಪನಗರ** | ಬಿ.ಬಿ.ಎಂ.ಪಿ | ಅಯ್ಯಪ್ಪನಗರದಲ್ಲಿ ರಸ್ತೆ ಅಭಿವೃದ್ಧಿ ಮತ್ತು ಕಲ್ವರ್ಟ ನಿರ್ಮಾಣ | 10.00 |
| **ಅಯ್ಯಪ್ಪನಗರ** | ಬಿ.ಬಿ.ಎಂ.ಪಿ | ಹೂಡಿ ಉಪವಿಭಾಗ ವ್ಯಾಪ್ತಿಯ, ಹೂಡಿ ವಾರ್ಡ್‌ನ ಅಯ್ಯಪ್ಪನಗರದ ಶ್ರೀ.ಸಾಯಿ ಹೆರಿಟೇಜ್ ಬಡಾವಣೆ, ಶಿರಿಡಿ ಬಡಾವಣೆಯಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ | 29.00 |
| **ಹೂಡಿ** | ಶಿಕ್ಷಣ ಇಲಾಖೆ | ಹೂಡಿ ಗ್ರಾಮದಲ್ಲಿ 4 ಶಾಲಾ ಕೊಠಡಿಗಳ ನಿರ್ಮಾಣ | 14.40 |

| ಹಳ್ಳಿ | ನಿಧಿ ಮೂಲ | ಕಾಮಗಾರಿ | ಮೊತ್ತ (ಲಕ್ಷ ರೂ.) |
|---|---|---|---|
| **ಹೂಡಿ** | ಬಿ.ಬಿ.ಎಂ.ಪಿ | ಹೂಡಿ ಉಪವಿಭಾಗ ವ್ಯಾಪ್ತಿಯ, ಹೂಡಿ ವಾರ್ಡ್‌ನ ಹೂಡಿ ಗ್ರಾಮದಲ್ಲಿ ಉಳಿದ ರಸ್ತೆ ಮತ್ತು ಚರಂಡಿ ಅಬಭಿವೃದ್ಧಿ ಕಾಮಗಾರಿ | 63.75 |
| **ಹೂಡಿ** | ಬಿ.ಬಿ.ಎಂ.ಪಿ | ಹೂಡಿ ವಾರ್ಡ್‌ನಲ್ಲಿ ಹೆಚ್ಚುವರಿ ವಿದ್ಯುತ್ ಬೀದಿ ದೀಪ ಅಳವಡಿಸಲು | 25.00 |
| **ಹೂಡಿ** | ಮುಜರಾಯಿ ಇಲಾಖೆ | ಲಕ್ಷ್ಮೀ ವೆಂಕಟೇಶ್ವರ ಸ್ವಾಮಿ ದೇವಸ್ಥಾನ | 5.00 |
| **ಹೂಡಿ** | ರೈಲ್ವೆ ಇಲಾಖೆ | ಹೂಡಿ ರೈಲ್ವೆ ಕ್ರಾಸಿಗ್‌ನಲ್ಲಿ ಮೇಲು ಸೇತುವೆ ನಿಮಾಣ | 2200.00 |
| **ಕೊಡಿಗೇಹಳ್ಳಿ** | ಬಿ.ಬಿ.ಎಂ.ಪಿ | ಗ್ರಾಮದ ರಸ್ತೆ, ಆರ್.ಸಿ.ಸಿ.ಚರಂಡಿ ನಿರ್ಮಾಣ ಕಾಮಗಾರಿ | 87.00 |
| **ಕೊಡಿಗೇಹಳ್ಳಿ** | ಬಿ.ಬಿ.ಎಂ.ಪಿ | ಕೊಡಿಗೇಹಳ್ಳಿ ಗ್ರಾಮದಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ | 20.00 |
| **ಕೊಡಿಗೇಹಳ್ಳಿ** | ಬಿ.ಬಿ.ಎಂ.ಪಿ | ಕೋಡಿಗೆಹಳ್ಳಿ ಮತ್ತು ಪ್ರಶಾಂತ್ ಬಡಾವಣೆ, ನಂಜುಂಡಪ್ಪ ಬಡಾವಣೆ, ಅಪ್ಪಣ್ಣ ಬಡಾವಣೆಯಲ್ಲಿ ರಸ್ತೆ ಮತ್ತು ಚರಂಡಿ ಡಾಂಬರೀಕರಣ ಕಾಮಗಾರಿ | 26.00 |

## ಪ್ರಗತಿಯಲ್ಲಿರುವ ಕಾಮಗಾರಿಗಳು

| | | | |
|---|---|---|---|
| **ಬೆಳತ್ತೂರು** | ಬಿ.ಬಿ.ಎಂ.ಪಿ ಬೃಹತ್ ರಸ್ತೆ | ಕುರುಡು ಸೊನ್ನೇಹಳ್ಳಿ ಕಾಲೋನಿ. ಕೆ.ಬೊಮ್ಮಸಂದ್ರ ಮತ್ತು ಬೆಳತ್ತೂರು ಹಳ್ಳಿ ಮಿತಿಗಳಲ್ಲಿ ಪಾದಚಾರಿ ಮಾರ್ಗ ಮತ್ತು ಚರಂಡಿ ನಿರ್ಮಾಣ ಕಾಮಗಾರಿ (ಜಿಒಕೆ) | 50.00 |
| **ಬೆಳತ್ತೂರು** | ಬಿ.ಬಿ.ಎಂ.ಪಿ ಬೃಹತ್ ರಸ್ತೆ | ಮೇಡಹಳ್ಳಿ – ಬೆಳತ್ತೂರು ರಸ್ತೆಯಿಂದ ಕಾಡುಗೋಡಿ–ಹೊಸಕೋಟೆ ರಸ್ತೆಯ ವರೆಗೆ ಸೇರುವ ರಸ್ತೆಯ ಅಗಲೀಕರಣ, ಅಭಿವೃದ್ಧಿ ಹಾಗೂ ಡಾಂಬರೀಕರಣ ಕಾಮಗಾರಿ | 250.00 |
| **ಬೈರತಿ** | ಬಿ.ಬಿ.ಎಂ.ಪಿ ಬೃಹತ್ ರಸ್ತೆ | ದೊಡ್ಡಗುಬ್ಬಿ ರಸ್ತೆಯಿಂದ ಬೈರತಿ ಮಾರ್ಗ ಗೆದ್ದಲಹಳ್ಳಿವರೆಗೆ ರಸ್ತೆ ಅಭಿವೃದ್ಧಿ | 170.00 |

| ಹಳ್ಳಿ | ನಿಧಿ ಮೂಲ | ಕಾಮಗಾರಿ | ಮೊತ್ತ (ಲಕ್ಷ ರೂ.) |
|---|---|---|---|
| **ಬೈರತಿ** | ಬಿ.ಬಿ.ಎಂ.ಪಿ ಬೃಹತ್ ರಸ್ತೆ | ಕೊತನೂರು ರಸ್ತೆಯಿಂದ ಬೈರತಿ, ಬಿಳಿಶಿವಾಲಯ, ಆಡೂರು, ಬಿದರಹಳ್ಳಿ ಹಿರಂಡಹಳ್ಳಿ ಮುಖಾಂತರ ಆವಲಹಳ್ಳಿ ರಸ್ತೆಯವರೆಗೆ, ರಸ್ತೆಯ ಅಗಲೀಕರಣ ಹಾಗೂ ಅಭಿವೃದ್ಧಿ ಕಾಮಗಾರಿ (ಜಿಒಕೆ) | 600.00 |
| **ಸಾದರಮಂಗಲ** | ಬಿ.ಬಿ.ಎಂ.ಪಿ ಬೃಹತ್ ರಸ್ತೆ | ಹೂಡಿ ರೈಲ್ವೆ ಗೇಟ್‌ನಿಂದ ಸಾದರಮಂಗಲ, ಕುಂಬೇನಗ್ರಹಾರ ಮಾರ್ಗ ಬೆಳತ್ತೂರುವರೆಗೆ ರಸ್ತೆ ಅಭಿವೃದ್ಧಿ | 50.00 |
| **ಬಿಳಿಶಿವಾಲೆ** | ಬಿ.ಡಿ.ಎ | ಬಿಳಿಶಿವಾಲೆ ಸರ್ಕಾರಿ ಕನ್ನಡ ಪ್ರಾಥಮಿಕ ಶಾಲೆಗೆ ಬಿ.ಡಿ.ಎ ವತಿಯಿಂದ 5 ಹೆಚ್ಚುವರಿ ಕೊಠಡಿಗಳ ನಿರ್ಮಾಣ | 40.40 |
| **ಹೂಡಿ** | ಬಿ.ಬಿ.ಎಂ.ಪಿ | ಹೂಡಿ ಗ್ರಾಮದಲ್ಲಿ ಕ್ರೀಡಾಂಗಣ ಅಭಿವೃದ್ಧಿ | 37.00 |
| **ಹೂಡಿ** | ಬಿ.ಡಿ.ಎ | ಹೂಡಿ ಸರ್ಕಾರಿ ಕನ್ನಡ ಪ್ರಾಥಮಿಕ ಶಾಲೆಗೆ ಬಿ.ಡಿ.ಎ ವತಿಯಿಂದ 5 ಹೆಚ್ಚುವರಿ ಕೊಠಡಿಗಳ ನಿರ್ಮಾಣ | 50.00 |
| **ಕೊಡಿಗೆಹಳ್ಳಿ** | ಬಿ.ಬಿ.ಎಂ.ಪಿ ಬೃಹತ್ ರಸ್ತೆ | ಕೊಡಿಗೇಹಳ್ಳಿಯಿಂದ ಕುರುಡುಸೊನ್ನೇಹಳ್ಳಿ ವರೆಗೆ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ ಕಾಮಗಾರಿ (ಜಿಒಕೆ) | 125.00 |
| | | **ಒಟ್ಟು** | **9031.95** |



ಕಾಡುಗೋಡಿ – ಬೆಳತ್ತೂರು ಬೀದಿ ದೀಪಗಳ ನೋಟ



ಅಯ್ಯಪ್ಪನಗರದಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ

# ಮಹದೇವಪುರ ಕ್ಷೇತ್ರಕ್ಕೆ ಅನ್ವಯವಾಗುವ ವಿವಿಧ ಕಾಮಗಾರಿಗಳ ಕಿರುನೋಟ

(ಲಕ್ಷ.ರೂ.)

| | |
|---|---|
| **ಬಿ.ಡಬ್ಲ್ಯೂ.ಎಸ್.ಎಸ್.ಬಿ** :ಕಾವೇರಿ ನೀರನ್ನು ಸರಬರಾಜು ಮಾಡಲು 368 ಕಿ.ಮೀ ಗಳ ಕೊಳವೆ ಮಾರ್ಗ ಅಳವಡಿಸಿದೆ | 4050.33 |
| **ಬಿ.ಡಬ್ಲ್ಯೂ.ಎಸ್.ಎಸ್.ಬಿ** : ಕಾವೇರಿ ನೀರನ್ನು ಸರಬರಾಜು ಮಾಡಲು 18 ಕಿ.ಮೀ ಗಳ ಬೃಹತ್ ಕೊಳವೆ ಮಾರ್ಗ ಅಳವಡಿಸಿದೆ | 2200.00 |
| **ಬಿ.ಡಬ್ಲ್ಯೂ.ಎಸ್.ಎಸ್.ಬಿ** : ಬಿ.ಡಬ್ಲ್ಯೂ.ಎಸ್.ಎಸ್.ಬಿ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಿಗೆ ನೀರು ಸರಬರಾಜು ಮಾಡಲು 264 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. | 1320.00 |
| **ಬಿ.ಡಬ್ಲ್ಯೂ.ಎಸ್.ಎಸ್.ಬಿ** : 25 ಟ್ಯಾಂಕರ್ ಮೂಲಕ ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ನೀರು ಸರಬರಾಜು ಮಾಡಲಾಗುತ್ತಿದೆ. | |
| **ಬಿ.ಡಬ್ಲ್ಯೂ.ಎಸ್.ಎಸ್.ಬಿ** : 425 ಕಿ.ಮೀ ಗಳ ಒಳ ಚರಂಡಿ ಕಾಮಗಾರಿ ಪ್ರಗತಿಯಲ್ಲಿದೆ | 16864.00 |
| **ವಸತಿ ಇಲಾಖೆ** :ಬಿಬಿಎಂಪಿ ವ್ಯಾಪ್ತಿಯಲ್ಲಿ 436 ಮನೆಗಳ ನಿರ್ಮಾಣ | 1308.00 |
| **ವಸತಿ ಇಲಾಖೆ** : ಬಸವ ವಸತಿ ಯೋಜನೆಯಲ್ಲಿ 1180 ಮನೆಗಳ ನಿರ್ಮಾಣ (ಸರ್ಕಾರದ ಸಾಲ 75000, ಬ್ಯಾಂಕ್ ಸಾಲ 75000, ಫಲಾನುಭವಿಗಳಿಂದ 50000 | 885.00 |
| **ಬಿ.ಸಿ.ಎಂ ಇಲಾಖೆ** :ಫಲಾನುಭವಿಗಳಿಗೆ ವಿವಿಧ ಯೋಜನೆಗಳಿಗೆಸಹಾಯಧನ ನೀಡಿದೆ | 94.00 |
| **ಶಿಕ್ಷಣ** :ಹೆಣ್ಣುಮಕ್ಕಳ ಶೌಚಾಲಯ, ಜಿಲ್ಲಾ ಪಂಚಾಯಿತಿ/ ತಾಲ್ಲೂಕು ಪಂಚಾಯಿತಿಯಿಂದ ಮಂಜೂರಾದ ಶಾಲಾ ಕಾಂಪೌಂಡ್, ದಾನಿಗಳಿಂದ ನಿರ್ಮಾಣವಾದ ಶೌಚಾಲಯ (ರೋಟರಿ ಸಂಸ್ಥೆ), ಗ್ರಂಥಾಲಯ (53), ಪೀಠೋಪಕರಣ ಖರೀದಿಸಲು (53), ದಾನಿಗಳಿಂದ ನಿರ್ಮಾಣವಾದ ಕೊಠಡಿಗಳು(ರೋಟರಿ ಸಂಸ್ಥೆ, ರಾಜಮನೆಯವರಿಂದ) (18), ಹೆಚ್ಎಎಲ್ ಸಂಸ್ಥೆಯಿಂದ ಪಡೆದ ಪೀಠೋಪಕರಣಗಳು (20), ದಾನಿಗಳಿಂದ ನಿರ್ಮಾಣವಾದ ಕಾಂಪೌಂಡ್ (ಐ ಗೇಟ್ ಸಂಸ್ಥೆ), ತೂಬರಹಳ್ಳಿ ಗ್ರಂಥಾಲಯ ನಿರ್ಮಾಣ (ಪ್ರಗತಿಯಲ್ಲಿದೆ), ಕಾಡುಗೋಡಿ ಪ್ರಥಮ ದರ್ಜೆ ಕಾಲೇಜು ಕಟ್ಟಡ ನಿರ್ಮಾಣ (ಮಂಜೂರಾಗಿದೆ), ವರ್ತೂರು ಪ್ರಥಮ ದರ್ಜೆ ಕಾಲೇಜು ಕಟ್ಟಡ ನಿರ್ಮಾಣ (ಮಂಜೂರಾಗಿದೆ) | 781.85 |
| ಬಿಬಿಎಂಪಿಯ ವಿವಿಧ ಯೋಜನೆಗಳ ವತಿಯಿಂದ ಫಲಾನುಭವಿಗಳಿಗೆ ಸವಲತ್ತುಗಳ ವಿತರಣೆ | 904.59 |
| **ಒಟ್ಟು** | **28313.77** |




ಬೆಳತ್ತೂರು ಗ್ರಾಮದಲ್ಲಿ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮ



ಹೂಡಿ ರೈಲ್ವೆ ಮೇಲುಸೇತುವೆ ನಿರ್ಮಾಣ ಪ್ರಗತಿಯಲ್ಲಿದೆ.



ಸಾದರ ಮಂಗಲ ಕಾರ್ಯಕ್ರಮದಲ್ಲಿ ಹಕ್ಕುಪತ್ರ ವಿತರಣೆ



ಗರುಡಾಚಾರ್ ಅಂಬೇಡ್ಕರ್ ನಗರದಲ್ಲಿ ಕುಂದುಕೊರತೆ ಸಮಾಲೋಚನೆ

ಮಹದೇವಪುರ
ವಿಧಾನಸಭಾ ಕ್ಷೇತ್ರ

# ಹೂಡಿ ವಾರ್ಡ್

# ಜನಹಿತ

## ಅರವಿಂದ ಲಿಂಬಾವಳಿ

ಜನಪರ ಕಾಯಕದ
ನೇರ ನೋಟ




www.arvindlimbavali.com

iam@arvindlimbavali.com

arvind.limbavali

bjparvind

**ಶಾಸಕರ ಕಾರ್ಯಾಲಯ**
**ಶ್ರೀ ಅರವಿಂದ ಲಿಂಬಾವಳಿ**
ಕಿಶನ್ ಆರ್ಕೇಡ್, ಫರ್ನ್ ಸಿಟಿ ರಸ್ತೆ
ದೊಡ್ಡ ನಕ್ಕುಂದಿ ಜಂಕ್ಷನ್
ಹೊರ ವರ್ತುಲ ರಸ್ತೆ
ಬೆಂಗಳೂರು 560037
ದೂರವಾಣಿ: 080 28511333 / 28511999